ಆಗಸ್ಟ್ 2023 ಸಂಪುಟ 19
ಸಂಚಿಕೆ 08
ಸಂಚಿಕೆ ಬೆಲೆ ರೂ. 1/-

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನೆ

ಮಾಸ ಪತ್ರಿಕೆ



ಬಂಟರ ಸಂಘ ಬೆಂಗಳೂರು ಮತ್ತು ಚಿನ್ಮಯ ಮಿಷನ್ ಸಂಯುಕ್ತ ಆಶ್ರಯದಲ್ಲಿ ನಡೆದ ಗೀತಾಜ್ಞಾನಯಜ್ಞ



Bunts Sangha R.N.S. Vidyaniketan-II Yoga Day




Bunts Sangha R.N.S. Evening College Sports Day



Bunts Sangha R.N.S. Vidyaniketan-II Investiture Ceremony

ಸರ್ವ ಸದಸ್ಯರಿಗೆ ದೇಶದ 76ನೇ
ಸ್ವಾತಂತ್ರ್ಯೋತ್ಸವದ ಶುಭಾಶಯಗಳು



324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com




# ಹಾರ್ದಿಕ ಅಭಿನಂದನೆಗಳು ಹಾಗೂ ಶುಭಾಶಯಗಳು

## ಶ್ರೀ ಎಚ್.ಎಸ್. ಶೆಟ್ಟಿ
(ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ)

**ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು**
ಮೈಸೂರು ಮರ್ಕಂಟೈಲ್ ಕಂಪೆನಿ ಲಿಮಿಟೆಡ್
ಸ್ಥಾಪಕ ಅಧ್ಯಕ್ಷರು–ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟಬಲ್ ಟ್ರಸ್ಟ್

ನಮ್ಮ ಸಮಕಾಲೀನ ಸಮಾಜದ ವಾಣಿಜ್ಯೋದ್ಯಮಿ, ಕೈಗಾರಿಕೋದ್ಯಮಿ, ಹಾಗೂ ಪ್ರಸಿದ್ಧ ರಫ್ತುದಾರರಾಗಿ ಹಲವು ವರ್ಷಗಳ ಕಠಿಣ ಪರಿಶ್ರಮ ಹಾಗೂ ಶ್ರದ್ಧೆಯಿಂದ ದುಡಿದು ಉನ್ನತ ಸಾಮಾಜಿಕ ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು, ಸಾವಿರಾರು ಮಕ್ಕಳ ವಿದ್ಯಾಭ್ಯಾಸ, ಸರಕಾರಿ ಶಾಲಾ–ಕಾಲೇಜುಗಳ ಉನ್ನತೀಕರಣ, ದುರ್ಬಲರಿಗೆ ಮನೆ ನಿರ್ಮಾಣ, ಅನೇಕರಿಗೆ ಉದ್ಯೋಗದ ಆಶ್ರಯ ಹಾಗೂ ಅನೇಕರಿಗೆ ಬದುಕಿನ ದಾರಿ ಮುಂತಾದ ಹಲವು ಸಾಮಾಜಿಕ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸಾಧನೆ ಹಾಗೂ ಸಾರ್ಥಕ ಬದುಕನ್ನು ಕಂಡು, ತ್ಯಾಗ ಹಾಗೂ ಸೇವೆಯನ್ನು ಒಪ್ಪಿಕೊಂಡು ಆಧುನಿಕ ತಾಂತ್ರಿಕತೆಯನ್ನು ತನ್ನ ಎಲ್ಲಾ ಕಾರ್ಯಕ್ಷೇತ್ರದಲ್ಲಿ ಅಳವಡಿಸಿಕೊಂಡು ದೇಶದ ಸುಪ್ರಸಿದ್ಧ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 23ನೇ ಘಟಿಕೋತ್ಸವದಲ್ಲಿ "ಡಾಕ್ಟರ್ ಆಫ್ ಸೈನ್ಸ್" ಗೌರವ ಪ್ರಶಸ್ತಿಯನ್ನು ಪಡೆದಿರುವ ನಿಮಗಿದೋ ಹಾರ್ದಿಕ ಹಾರ್ದಿಕ ಶುಭಾಶಯಗಳು. ನೀವು ಇನ್ನಷ್ಟು ಎತ್ತರಕ್ಕೆ ಬೆಳೆದು ಉನ್ನತೋನ್ನತ ಪ್ರಶಸ್ತಿಗೆ ಭಾಜನರಾಗಿ ಎಂದು ಹೃದಯ ಪೂರ್ವಕವಾಗಿ ಹಾರೈಸುತ್ತೇವೆ.

**ಆರೂರು ನಾರಾಯಣ ಶೆಟ್ಟಿ**

ADVT.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL 19** | **AUGUST 2023** | **ISSUE 08**

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.

**ಸಹ ಸಂಪಾದಕರು :**
ಶ್ರೀ ಸತ್ಯಾನಂದ ಮೇಲಾಂಟ ಎನ್.

**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಡಾ॥ ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ

**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. **– ಸಂಪಾದಕ ಮಂಡಳಿ**

## ಒಳ ಪುಟಗಳಲ್ಲಿ.....

| | **ಪುಟ** |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| ಅಗತ್ಯ(ತೆ) ಮತ್ತು ಅನಿವಾರ್ಯ(ತೆ) | 5 |
| ವಿಶಿಷ್ಟ ಭಾಷೆ, ಸಂಸ್ಕೃತಿಯ ನೆಲೆವೀಡು ಕುಂದಾಪುರ | 6–7 |
| ಸ್ವಾತಂತ್ರ್ಯ ಮತ್ತು ಬ್ರಿಟಿಷರ ಘನಘೋರ ಅಪರಾಧಗಳು | 8–9 |
| The Integration Of Princely States Unifying A Diverse Nation | 10–12 |
| Smt. Yerukone Susheela Shetty | 13 |

### ಮುಖ ಪುಟ

ಬಂಟರ ಸಂಘ ಬೆಂಗಳೂರು ಮತ್ತು ಚಿನ್ಮಯ ಮಿಷನ್ ಸಂಯುಕ್ತ ಆಶ್ರಯದಲ್ಲಿ ನಡೆದ ಗೀತಾಜ್ಞಾನಯಜ್ಞ

Bunts Sangha RNS Vidyaniketan-II Yoga Day

Bunts Sangha RNS Evening College Sports Day

Bunts Sangha RNS Vidyaniketan-II Investiture Ceremony

# ಸಂಪಾದಕೀಯ

## ಜೀವನದ ಮೌಲ್ಯ



ಜೀವಿಗಳಲ್ಲಿ ಶ್ರೇಷ್ಠ ಜೀವಿ ಮಾನವ, ಬುದ್ಧಿ ಜೀವಿ ಮಾನವ. ಅವನು ತನ್ನ ಜೀವಿತಾವಧಿಯಲ್ಲಿ ಸಾಗುವ ದಾರಿಯು ಕ್ರಮಬದ್ಧವಾಗಿದ್ದರೆ ಅವನ ಬದುಕು ಸುಸೂತ್ರವಾಗಿರುತ್ತದೆ. ಅದಕ್ಕಾಗಿ ಮಾನವನು ಕೆಲವೊಂದು ನೀತಿ ನಿಯಮಗಳನ್ನು ಸರಿಯಾಗಿಟ್ಟುಕೊಂಡು ನಡೆದಾಗ ಮೌಲ್ಯಯುತ ಜೀವನ ಸಾಧ್ಯ.

ಮೌಲ್ಯ ಎಂದರೆ ಬೆಲೆ. ಅದರಲ್ಲೂ ಜೀವನದ ಮೌಲ್ಯ ಎಂದರೆ ಬದುಕಿನ ಪ್ರತಿ ಹಂತದಲ್ಲಿ ಅಂದರೆ ಬಾಲ್ಯಾವಸ್ಥೆಯಿಂದ ಮುದಿತನದವರೆಗೂ ಅರ್ಥಪೂರ್ಣವಾದ ನಡೆನುಡಿ. ಇದಕ್ಕೆ ಮೊದಲು ನಮ್ಮ ಬಗ್ಗೆ ನಮಗೆ ಪರಿಚಯವಿರಬೇಕು. ಪ್ರತಿಯೊಬ್ಬನ ಒಳಗೂ ಪರಮ ಚೈತನ್ಯವೇ ಅಡಗಿದೆ. ಆದರೆ ಅದನ್ನು ಅನುಷ್ಠಾನಗೊಳಿಸಲು ಬದುಕಿನಲ್ಲಿ ಮೌಲ್ಯಗಳಿರಬೇಕು. ನಮ್ಮ ಹಿರಿಯರಿಂದ ಕಲಿತ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಾಕು, ಜೀವನ ನಿರಾಳ.

ಇಂದಿನ ಸ್ಪರ್ಧಾತ್ಮಕ ಸನ್ನಿವೇಶದಲ್ಲಿ ಜೀವನ ನಡೆಸುವುದೇ ಕಷ್ಟವಾಗಿರುವಾಗ ಜೀವನದ ಮೌಲ್ಯಗಳನ್ನು ಚಿಂತಿಸಲು ಸಮಯವೆಲ್ಲಿದೆ? ಹಾಗೇನಾದರೂ ಸಮಯ ಸಿಕ್ಕಿದರೆ ಪಾಶ್ಚಾತ್ಯ ಚಿಂತಕರ ದೃಷ್ಟಿ ನಮಗೆ ತಯಾರಾಗಿ ಸಿಕ್ಕಿ ಬಿಡುತ್ತದೆ. ಅದು ಸುಲಭ ಮತ್ತು ಚಂದವಾಗಿರುತ್ತದೆ. Let us eat, drink and make merry. ಜೀವನವಿದ್ದಷ್ಟು ಅದನ್ನು ಮೋಜಿನಿಂದ ಕಳೆಯಬೇಕು ತಿನ್ನು, ಕುಡಿ ಆನಂದವಾಗಿರು ಎಂಬುದೇ ಇಂದಿನ ಪೀಳಿಗೆಯ ಜೀವನದ ಮೌಲ್ಯವಾದ ಹಾಗೆ ಇದೆ. ಹೌದು ಎಲ್ಲರಿಗೂ ತಾನು ಸುಖವಾಗಿರಬೇಕು, ಆನಂದವಾಗಿರಬೇಕು ಎಂಬ ಆಶಯ ಇರುವುದು ತಪ್ಪಲ್ಲ. ಅದರ ದಾರಿ ಯಾವ ರೀತಿ ಇರಬೇಕು, ಶ್ರೀಮಂತಿಕೆ ಇರುವವರು ಇಂದು ಸುಖದಿಂದಲೇ ಇದ್ದಾರಾ? ಯಾರಲ್ಲಿ ನೈತಿಕತೆ ಇರುತ್ತದೋ ಅವರು ಮಾತ್ರ ಅವರ ಜೀವನ ಶಿಸ್ತುಬದ್ಧವಾಗಿದ್ದು ಸಂತೋಷದಿಂದ ಇರಲು ಸಾಧ್ಯ.

ಜೀವನದ ಮೌಲ್ಯಗಳನ್ನು ಮಕ್ಕಳಿಗೆ ಸಣ್ಣದರಲ್ಲಿಯೇ ಕಲಿಸುವುದು ಪೋಷಕರ ಆದ್ಯ ಕರ್ತವ್ಯ. ಉದಾ: ತಾಯಿ ಟಿ.ವಿ. ನೋಡುತ್ತಾ ಮಗುವಿಗೆ ಓದು ಎಂದರೆ ಆ ಮಗು ಓದುವುದಿಲ್ಲ. ತಾಯಿ ತಾನು ಒಳ್ಳೆಯ ಕೆಲಸ ಮಾಡುತ್ತಿದ್ದು, ಇಲ್ಲ, ಯಾವುದಾದರೂ ಪುಸ್ತಕವನ್ನು ಓದುತ್ತಾ ಮಗುವಿಗೆ ಹೇಳಿದರೆ ಅದು ಅಮ್ಮನನ್ನೇ ಅವಲಂಬಿಸುತ್ತದೆ. ಮಕ್ಕಳು ಎಳವೆಯಲ್ಲಿ ನೋಡಿ ಕಲಿಯುತ್ತಾರೆ ಹೊರತಾಗಿ ಕೇಳಿ ಕಲಿಯುವುದಿಲ್ಲ. ಹಾಗಾಗಿ ಹೆತ್ತವರು ತನ್ನ ಮಕ್ಕಳು ಮೌಲ್ಯಯುತರಾಗಿ, ನೀತಿವಂತರಾಗಿ ಬಾಳಬೇಕೆಂಬ ಹಂಬಲವಿದ್ದರೆ ಸ್ವಲ್ಪವಾದರೂ ತ್ಯಾಗಮಾಡಬೇಕು. ಮಕ್ಕಳಲ್ಲಿ ಧೈರ್ಯವನ್ನು ತುಂಬಿಸಬೇಕು. ಸೋತರೂ ಗೆಲ್ಲುವ ಛಲವನ್ನು ಹುಟ್ಟಿಸಬೇಕೇ ಹೊರತು ಅವರ ಮನಸ್ಸನ್ನು ಕುಗ್ಗಿಸಬಾರದು. ನಾವು ನ್ಯಾಯಯುತವಾಗಿದ್ದರೆ ಅವಕಾಶಗಳು ವಿಫುಲವಾಗಿವೆ ಎಂಬ ಸತ್ಯವನ್ನು ತೋರಿಸಬೇಕು. ನಾವು ಮಕ್ಕಳಾಗಿದ್ದಾಗ ನೀತಿ ಕಥೆಯ ಮೂಲಕ ಬದುಕಿನ ಅನೇಕ ಪಾಠಗಳನ್ನು ಕೇಳಿರುವುದು ಇಂದಿಗೂ ನಾವು ಮರೆತಿರುವುದಿಲ್ಲ. ಆದರೆ ಇಂದು ಮಕ್ಕಳನ್ನು ಪೋಷಕರು ಅತಿಯಾದ ಮುದ್ದಿನಿಂದ ಪರಾವಲಂಬಿಗಳಾಗಿ ಮಾಡಿರುವುದೇ ಜೀವನದಲ್ಲಿ ಮೌಲ್ಯರಹಿತರನ್ನಾಗಿಸಿದೆ.

ಸರ್ವತ್ರ ಸಮ ಬುದ್ದಯ, ಅಂದರೆ ಜೀವನದ ಏರಿಳಿತಗಳ ನಡುವೆ ಸಮಚಿತ್ತವನ್ನು ಹೊಂದಿರುವುದು. ವೈಫಲ್ಯಗಳಿಂದ ಮುಳುಗಡೆ ಅಥವ ಯಶಸ್ಸಿನಿಂದ ಹಿಗ್ಗದೆ ಧೈರ್ಯ, ಪರಿಶ್ರಮ, ಘನತೆ ಮತ್ತು ನಮ್ರತೆಯಿಂದ ಜೀವನವನ್ನು ಎದುರಿಸುತ್ತೇನೆ ಎಂಬಂತೆ ಇರಬೇಕು, ನಮ್ಮ ಸನಾತನ ಧರ್ಮದ ಮೌಲ್ಯಗಳನ್ನು ಅರಿತಿರಬೇಕು ಮತ್ತು ಅದನ್ನು ಉಳಿಸಿ, ಬೆಳೆಸಿದಾಗ ಮಾತ್ರ ಮುಂದೆ ನಮ್ಮ ಸಮಾಜದ ಧರ್ಮ ಉಳಿಯಲು ಸಾಧ್ಯ.

ಬೇರೆಯವರ ಧರ್ಮವನ್ನು ತೆಗಳುವುದಕ್ಕಿಂತ ನಮ್ಮ ಧರ್ಮದ ಮೌಲ್ಯಗಳನ್ನು ನಾವೇ ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಸಾಕು, ಸ್ವಾಸ್ಥ್ಯ ಸಮಾಜ ಮತ್ತು ನೆಮ್ಮದಿಯ ಜೀವನ ಸಿಗುವುದು ಸತ್ಯ.

**ಅರವಿಂದ ಶೆಟ್ಟಿ ಎಂ.**

# ಅಧ್ಯಕ್ಷರ ಮಾತು



ಸಂಘದ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ದೇಶದ 76ನೇ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು, ಹಾಗೆಯೇ ಎಲ್ಲರ ಸಹಕಾರ, ಸಹಭಾಗಿತ್ವದಿಂದ ನಮ್ಮ ದೇಶ ಇನ್ನೂ ಹೆಚ್ಚಿನ ಪ್ರಗತಿ ಪಥದಲ್ಲಿ ಸಾಗಲಿ ಹಾಗೂ ಎಲ್ಲಾ ಪ್ರಜೆಗಳೂ ನೆಮ್ಮದಿ, ಸೌಹಾರ್ದ ಭಾವನೆಯಿಂದ ಬಾಳಲಿ ಎಂದು ಹಾರೈಸೋಣ.

ಒಂದು ದೇಶ ಸೌಹಾರ್ದತೆಯಿಂದ ಮುನ್ನಡೆಯಬೇಕಾದರೆ ಎಲ್ಲಾ ಪ್ರಜೆಗಳ ಆರೋಗ್ಯಕರವಾದ ಚಿಂತನೆ, ತ್ಯಾಗ ಮನೋಭಾವ, ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವಂತಹ ಸಿರಿವಂತಿಕೆ, ಶೈಕ್ಷಣಿಕ, ಔದ್ಯೋಗಿಕ ಹಾಗೂ ಸಾಮಾಜಿಕ ಬೆಳವಣಿಗೆ ಅತ್ಯಗತ್ಯ. ಜಾತಿಭೇದಗಳನ್ನು, ಬಡವರು-ಸಿರಿವಂತರು ಎಂಬ ಭಾವನೆಗಳನ್ನು ಮರೆತು ಎಲ್ಲರೂ ಒಂದಾಗಿ, ಒಗ್ಗಟ್ಟಾಗಿ ಬಾಳುವುದೇ ದೇಶದ ಪ್ರಗತಿಯ ಬುನಾದಿ.

ಈ ನಿಯಮ ಸಮಾಜದ ಸಂಸ್ಥೆಗಳಿಗೂ ಅನ್ವಯ. ಸುಮಾರು 19 ಸಾವಿರ ಸದಸ್ಯರಿರುವ ನಮ್ಮ ಸಂಘವು ಕೂಡಾ ನಿರ್ದಿಷ್ಟ ದಿಕ್ಕಿನಲ್ಲಿ ಮುನ್ನಡೆಯಬೇಕಾದರೆ ಸರ್ವ ಸದಸ್ಯರ ಸಹಕಾರ ಬಹಳ ಮುಖ್ಯ. ಒಂದು ಸಂಘ, ಸಂಸ್ಥೆ ಎಂದ ಮೇಲೆ ಎಲ್ಲಾ ತರಹದ ಬೆಳವಣಿಗೆಗಳು, ಬೇರೆ ಬೇರೆ ತರಹದ ವಿಚಾರಗಳು ಹರಿದಾಡುವುದು ಸಹಜ. ಆದರೆ ನಾವು ಪ್ರಾಮಾಣಿಕವಾಗಿ ಈ ವಿಷಯಗಳನ್ನು ಕೂಲಂಕುಷವಾಗಿ ತಿಳಿದು ಸತ್ಯಾಸತ್ಯತೆಯ ಅರಿವಾದ ನಂತರವೇ ಇಂತಹ ವಿಚಾರಗಳನ್ನು ಮಾತನಾಡಬೇಕು. ಸರಿಯಾದ ಮಾಹಿತಿ ಇಲ್ಲದೆ, ಯಾರ್ಯಾರ ಮಾತಿಗೆ ಕಿವಿಗೊಟ್ಟು, ಸುಳ್ಳು ಸುದ್ದಿಗಳನ್ನು ಅನಾವಶ್ಯಕವಾಗಿ ಹರಡುವುದು ನಮ್ಮಂತಹ ಸಂಸ್ಥೆಗೆ ಹಾನಿಕಾರಕವಾಗಬಹುದು. ಪ್ರತಿಯೊಂದು ವಿಚಾರ ನಮ್ಮ ಗಮನಕ್ಕೆ ಬಂದಾಗ ನಾವು ಆಡಳಿತ ಮಂಡಳಿಯವರು ಅದರ ಬಗ್ಗೆ ಚರ್ಚಿಸಿ ಬೇಕಾದ, ತಕ್ಕ ನಿರ್ಧಾರಗಳನ್ನು ತೆಗೆದುಕೊಂಡು ಎಂತಹ ಸಮಸ್ಯೆಗಳಿದ್ದರೂ ಅವುಗಳನ್ನು ಬಗೆಹರಿಸುವ ಕೆಲಸವನ್ನು ಮಾಡುತ್ತೇವೆ. ಒಬ್ಬ ವ್ಯಕ್ತಿಗಿಂತ ಸಂಘದ ಹಿತದೃಷ್ಟಿ ಮುಖ್ಯವಾಗಿರುತ್ತದೆ ಎಂದಾದರೆ ನಾವು ಕೂಡಾ ಆ ನಿಟ್ಟಿನಲ್ಲಿಯೇ ಕೆಲಸ ಮಾಡುತ್ತೇವೆ.

ನಮ್ಮ ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನ 1 ಮತ್ತು 2ರಲ್ಲಿ ಖಾಲಿ ಇರುವ ಎಲ್ಲಾ ಶಿಕ್ಷಕರ ಮತ್ತು ಇತರ ಸಿಬ್ಬಂದಿಗಳ ನೇಮಕ ಮಾಡಲಾಗಿದೆ. ವಿಜಯನಗರ ಮತ್ತು ಯಲಚಗುಪ್ಪೆ ಎರಡೂ ಸಂಕೀರ್ಣಗಳ ದೈನಂದಿನ ಚಟುವಟಿಕೆಗಳು, ಶಿಕ್ಷಕರ, ಸಿಬ್ಬಂದಿಗಳ ಮತ್ತು ಮಕ್ಕಳ ಪೋಷಕರ ಸಲಹೆ ಸೂಚನೆಗಳನ್ನು ಗಮನದಲ್ಲಿರಿಸಿಕೊಂಡು ಸರಿಯಾದ ದಿಕ್ಕಿನಲ್ಲಿ ಕೆಲಸಗಳು ನಡೆಯುತ್ತಿವೆ. ಬೇಕಾದ ಎಲ್ಲಾ ಅಗತ್ಯತೆಗಳನ್ನು ಶಾಲಾ ಗವರ್ನಿಂಗ್ ಕೌನ್ಸಿಲ್‌ನ ಜೊತೆ ಸಮಾಲೋಚಿಸಿ, ಪೂರೈಸಲಾಗುತ್ತಿದೆ.

ಸಂಘದ ಉಪ ಸಮಿತಿಗಳ ಚಟುವಟಿಕೆಗಳೂ ಗರಿಗೆದರುತ್ತಿವೆ. ಮುಂಬರುವ ದಿನಗಳಲ್ಲಿ ನಡೆಯಬೇಕಾದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಗಿದೆ. ಇದೇ ತಿಂಗಳ 15ನೇ ತಾರೀಕಿನಂದು ನಡೆಯಲಿರುವ ಉಚಿತ ವೈದ್ಯಕೀಯ ಶಿಬಿರದ ತಯಾರಿ ಬಹುತೇಕ ಪೂರ್ಣಗೊಂಡು ಸಮಿತಿಯ ಚೇರ್‌ಪರ್ಸನ್ ಶ್ರೀ ನಿರಂಜನ್ ಶೆಟ್ಟಿಯವರ ತಂಡ ಕಾರ್ಯನಿರತವಾಗಿದೆ. ಹಾಗೆಯೇ ಇತರ ಸಮಿತಿಯವರು ಕೂಡಾ ತಮ್ಮ ತಮ್ಮ ಕ್ಷೇತ್ರದ ಕಾರ್ಯಕ್ರಮಗಳ ತಯಾರಿಯಲ್ಲಿ ತೊಡಗಿದ್ದಾರೆ.

ಸಂಘದ ಅದಿದೇವತೆಯಾದ ಶ್ರೀ ವರಸಿದ್ಧಿ ವಿನಾಯಕನು ಸರ್ವಸದಸ್ಯರಿಗೂ ಆಯುರಾರೋಗ್ಯ ಐಶ್ವರ್ಯ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

hegdemm@gmail.com

# ಗೌರವ ಕಾರ್ಯದರ್ಶಿಗಳ ವರದಿ



ಸದಸ್ಯ ಬಾಂಧವರೆಲ್ಲರಿಗೂ 76ನೇ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು.

ಚಿನ್ಮಯ ಮಿಷನ್ ಸಹಯೋಗದೊಂದಿಗೆ ದಿನಾಂಕ 30.07.2023 ರಿಂದ 06.08.2023 ರವರೆಗೆ ಪ್ರತಿದಿನ ಸಂಜೆ ಕಿಕ್ಕಿರಿದು ತುಂಬಿದ ಸಭಾಭವನದಲ್ಲಿ ಸ್ವಾಮಿ ಬ್ರಹ್ಮಾನಂದ ಅವರು ನಡೆಸಿಕೊಟ್ಟ 26ನೇ ವರ್ಷದ ಗೀತಾಜ್ಞಾನಯಜ್ಞ ಆಧ್ಯಾತ್ಮಿಕ ಬಂಧುಗಳ ಮೆಚ್ಚುಗೆಗೆ ಪಾತ್ರವಾಯಿತು.

ದಿನಾಂಕ 08.07.2023 ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ವಿದ್ಯಾರ್ಥಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ನೂತನ 'Student Council'ಗೆ ಆಯ್ಕೆಗೊಂಡ ವಿದ್ಯಾರ್ಥಿ ಪ್ರತಿನಿಧಿಗಳಿಗೆ Badge ಗಳನ್ನು ನೀಡಲಾಯಿತು. ದಿನಾಂಕ 02.07.2023 ರಂದು ಬಂಟರ ಸಂಘ ಆರ್.ಎನ್.ಎಸ್. ಸಂಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗಿತ್ತು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ - II ಸಂಸ್ಥೆಯಲ್ಲೂ ಜುಲೈ ತಿಂಗಳಿನಲ್ಲಿ ವಿವಿಧ ಚಟುವಟಿಕೆಗಳು ನಡೆದವು. ದಿನಾಂಕ 15.07.2023 ರಂದು ಶ್ರೀಮತಿ ರೇಣು ಶ್ರೀನಿವಾಸ್‌ರವರಿಂದ ಪೂರ್ವ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳ ಪೋಷಕರಿಗೆ 'Orientation' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ದಿನಾಂಕ 21.07.2023 ರಂದು ವಿದ್ಯಾರ್ಥಿಗಳ ಪದಗ್ರಹಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಎರಡೂ ಸಂಕೀರ್ಣಗಳಲ್ಲಿ ಯೋಗ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ದಿನಾಂಕ 15.08.2023 ರಂದು ವೈದ್ಯಕೀಯ ವಿಭಾಗದ ವತಿಯಿಂದ ನಗರದ ಪ್ರತಿಷ್ಠಿತ ಆಸ್ಪತ್ರೆಗಳ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಚಿತ ಕಣ್ಣಿನ ತಪಾಸಣೆ ಹಾಗೂ ಕನ್ನಡಕಗಳ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಮಾಜ ಬಾಂಧವರೆಲ್ಲರೂ ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

ಸಂಘದ ವರಸಿದ್ಧಿ ವಿನಾಯಕ ಮಂದಿರದಲ್ಲಿ ಸಮಿತಿಯ ಚೇರ್‌ಪರ್ಸನ್ ಕೀರ್ತನ್ ಶೆಟ್ಟಿ, ಸಂಚಾಲಕರಾದ ಶ್ರೀ ಜಯಕರ ಶೆಟ್ಟಿ ಹಾಗೂ ತಂಡದ ಉಸ್ತುವಾರಿಯಲ್ಲಿ ಪ್ರತೀ ತಿಂಗಳು ಸಂಕಷ್ಟಹರ ಚತುರ್ಥಿ ಪ್ರಯುಕ್ತ ವಿಶೇಷ ಪೂಜೆಯೊಂದಿಗೆ ವಿವಿಧ ಪ್ರಖ್ಯಾತ ಹಾಡುಗಾರರ ತಂಡದಿಂದ ಭಜನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಭಜನಾ ಕಾರ್ಯಕ್ರಮಗಳಿಗೆ ಸಮಿತಿಯ ಸದಸ್ಯರಾದ ಶ್ರೀ ಚಂದ್ರಶೇಖರ್ ಶೆಟ್ಟಿಯವರು ಹೆಚ್ಚಿನ ಮುತುವರ್ಜಿ ವಹಿಸುತ್ತಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೆರೆಯುತ್ತಿರುವುದು ಸಂತಸದ ವಿಷಯ.

ಇಂತಿ ತಮ್ಮ ಪ್ರೀತಿಯ,
**ಬಿ. ಆನಂದರಾಮ ಶೆಟ್ಟಿ**
**ಗೌರವ ಕಾರ್ಯದರ್ಶಿ**

# ಅಗತ್ಯ(ತೆ) ಮತ್ತು ಅನಿವಾರ್ಯ(ತೆ)



ಎ. ಕೃಷ್ಣಾನಂದ ಶೆಟ್ಟಿ

ಹುಟ್ಟು ಆಕಸ್ಮಿಕ ಬದುಕು ಅನಿವಾರ್ಯ, ಸಾವು ನಿಶ್ಚಿತ. ಇದು ನಾವು ತಿಳಿದುಕೊಂಡಿರುವ ಸತ್ಯ. ಅಗತ್ಯತೆ ಮತ್ತು ಅನಿವಾರ್ಯತೆ ನಮ್ಮ ದೈನಂದಿನ ಜೀವನದಲ್ಲಿ ಇದ್ದೇ ಇದೆ. ಇದಕ್ಕೆ ನಾವು ಪ್ರಾಧಾನ್ಯ ಅಲ್ಲದೆ ಪ್ರಾಶಸ್ತ್ಯತೆ ಕೊಟ್ಟೇ ಕೊಡುತ್ತೇವೆ. ನಮಗೆ ದುಡಿಮೆ ಬೇಕು. ಒಮ್ಮೊಮ್ಮೆ ಅಲ್ಲಿ ನಮಗೆ ಆ ವೃತ್ತಿ (ಉದ್ಯೋಗ) ಒಗ್ಗದಿದ್ದಾಗ ಕಿರಿಕಿರಿ, ಒತ್ತಡ ಇದ್ದಾಗ ಬಹಳಷ್ಟು ಇಕ್ಕಟ್ಟಿನ ಪರಿಸ್ಥಿತಿಗೆ ಒಳಗಾಗುತ್ತೇವೆ. ಬಿಟ್ಟರೆ ಹೊಟ್ಟೆ ಪಾಡು, ಆರ್ಥಿಕತೆಗೆ ಧಕ್ಕೆ! ಬಿಡದಿದ್ದರೆ ತಡೆಯಲಾರದ ಹಿಂಸೆ! ಇಲ್ಲಿ ಅಗತ್ಯತೆ ಮತ್ತು ಅನಿವಾರ್ಯತೆ ಬಹಳಷ್ಟು ಆದ್ಯತೆಯನ್ನು ಎತ್ತಿ ತೋರಿಸುತ್ತದೆ.

ಇಂಥ ವಿಚಾರ–ವಿಷಯಗಳು ವೃತ್ತಿಯಲ್ಲೋ ಅಥವಾ ಮನೆ ಅಥವಾ ಪರಿಸರದ ವಾತಾವರಣದಲ್ಲಿ ಸದಾ ಕಾಡುತ್ತಾ ಇರುತ್ತದೆ. ನಾವು ಯೋಚಿಸಬೇಕಾದ್ದು ಬಹಳಷ್ಟಿದೆ. ಒಮ್ಮೊಮ್ಮೆ ಒಂದು ಜಾಗಕ್ಕೊ ಅಥವಾ ವ್ಯಕ್ತಿಯನ್ನು ಭೇಟಿ ಮಾಡ ಬೇಕಾದಾಗ ನಮಗೆ ಏನಾದರೂ ಆ ಹೊತ್ತಿನಲ್ಲಿ ಆಪತ್ತು–ತೊಂದರೆಗಳು ಬಂದಾಗ ಅಗತ್ಯತೆ ಮತ್ತು ಅನಿವಾರ್ಯತೆಗಳ ತುಮುಲತೆಗೆ ಒಳಗಾಗುತ್ತೇವೆ. ಒಂದು ಕಡೆ ಭವಿಷ್ಯದ ಪ್ರಶ್ನೆ ಪಡೆಯುವಂಥದ್ದು ಸಿಗುವಂಥದ್ದು ಇದೆ. ಇನ್ನೊಂದು ಕಡೆ ಬಾಂಧವ್ಯ, ಮಿತ್ರತನ ಸಂಬಂಧ ಇತ್ಯಾದಿಗಳನ್ನು ಬಿಡದ ಅನಿವಾರ್ಯತೆ. ಹೀಗೆ ನಾವು ವಿವೇಚನಾ ಸ್ಥಿತಿಗೆ ಆವರಿಸಿಕೊಳ್ಳುತ್ತೇವೆ! ನಮ್ಮ ಆಯ್ಕೆಗಳು ಬಹಳ ದುರ್ಗಮ ಮತ್ತು ಕಠಿಣತೆಗಳ ಅನುಭವಗಳನ್ನು ಕೊಡುತ್ತವೆ. ಅಥವಾ ನಾವು ಅಗತ್ಯದ ಕಡೆ ಮಹತ್ವಕೊಡಬೇಕು, ಇಲ್ಲಾ ಅನಿವಾರ್ಯದ ಕಡೆ ಪ್ರಾಮುಖ್ಯತೆ ಕೊಡಬೇಕು. ಒಳ್ಳೆಯದ್ದು ಕೆಟ್ಟದ್ದು ಈ ಪ್ರಪಂಚದಲ್ಲಿ ಇದ್ದೇ ಇದೆ ತಾನೇ?.

ಅನಿವಾರ್ಯತೆ ಕಲಿಕೆಯಲ್ಲಿ ಇರಬಹುದು. ಮನೆಯವರ ಒತ್ತಾಸೆಗೆ ಮಕ್ಕಳು ಬಲಿ ಬೀಳಬಹುದು. ಅತೀ ಹೆಚ್ಚಿನ ಡೊನೇಷನ್ (ಪ್ರವೇಶ ಧನ) ಇದ್ದ ಶಾಲೆಗಳಿಗೆ ಕೆಲ ಮಕ್ಕಳನ್ನು ಸೇರಿಸಬಹುದು. ಇನ್ನೂ ಕೆಲವರು ಕಡಿಮೆ ಪ್ರವೇಶ ಧನ ಇದ್ದ ಶಾಲೆಗಳಿಗೆ ಕೆಲ ಮಕ್ಕಳನ್ನು ಸೇರಿಸಬಹುದು. ಆದರೆ ಆ ಮಕ್ಕಳಿಗೆ ಅಲ್ಲಿ ಓದಲು ಮನಸ್ಸಿದೆಯೇ? ವ್ಯವಸ್ಥೆಗಳು ಸರಿ ಇದೆಯೇ? ಇತ್ಯಾದಿ ಅಂಶಗಳಿಗೆ ಗಮನ ಕೊಡದಿರಬಹುದು. ನಮ್ಮ ಮಕ್ಕಳು ರ್‍ಯಾಂಕ್ ಬರಬೇಕೆಂಬುದು ಹೆತ್ತವರ ಹಂಬಲ ಇರಬಹುದು. ಬಡತನ ಇದ್ದವರಿಗೆ ಕಡಿಮೆ ಪ್ರವೇಶಧನ ಇದ್ದ ಶಾಲೆ ಅನಿವಾರ್ಯ. ದುಬಾರಿ ವೆಚ್ಚದ ಪ್ರವೇಶಧನದ ಶಾಲೆ ಶ್ರೀಮಂತರಿಗೆ ಅವರ ಗೌರವ ಪ್ರತಿಷ್ಠೆಗಳಿಗೆ ಅಗತ್ಯವಾಗಿರಲೂಬಹುದು. ಒಟ್ಟಾರೆ ಅಗತ್ಯ(ತೆ) ಅನಿವಾರ್ಯ(ತೆ) ಇವೆರಡು ಒಂದು ನಾಣ್ಯದ ಎರಡು ಮುಖಗಳು.

ವಾಹನ ಖರೀದಿಸುವಾಗಲೂ ಅಗತ್ಯ ಮತ್ತು ಅನಿವಾರ್ಯತೆಗಳಿಗೆ ಹೆಚ್ಚಿನ ಆದ್ಯತೆ ಕೊಡಲಾಗುತ್ತದೆ. ಕೆಲ ಮಕ್ಕಳು, ತರುಣರು, ತಂದೆ–ತಾಯಿಗಳಲ್ಲೊ ಒತ್ತಾಯ ಪೂರ್ವಕವಾಗಿ ವಾಹನದ ಅಗತ್ಯ ಇಲ್ಲದಿದ್ದರೂ ಅನಿವಾರ್ಯದ ಕಾಳಜಿಗೆ ಗಮನ ಕೊಡಲು ಮುಂದಾಗುತ್ತಾರೆ. ಇದು ಒಮ್ಮೊಮ್ಮೆ ತಂದೆ–ತಾಯಿಗಳಿಗೆ ಬೆದರಿಕೆ, ಆಮೀಷದ ಕಡೆ ಹೆಚ್ಚಿನ ಒತ್ತು ಕೊಡುವಂತೆ ಪ್ರೇರೇಪಿಸುತ್ತಾರೆ.

ಕೊನೆ ಮಾತು: ಅಗತ್ಯ(ತೆ) ಮತ್ತು ಅನಿವಾರ್ಯ(ತೆ) ನಮ್ಮ ಬದುಕಿನಲ್ಲಿ ಬಹಳಷ್ಟು ಮಹತ್ವಗಳನ್ನು ಕೊಡಬೇಕಾಗುತ್ತದೆ. ಯಾವುದು ಬೇಕು, ಯಾವುದು ಬೇಡ? ಇಂಥ ನಿರ್ಧಾರಗಳನ್ನು ತೆಗೆದುಕೊಳ್ಳುವ ಜ್ಞಾನ ನಮ್ಮಲ್ಲಿದೆ. ಅದುವೇ ಅಗತ್ಯ ಮತ್ತು ಅನಿವಾರ್ಯ. ಒಮ್ಮೊಮ್ಮೆ ನಾವು ಇದರಿಂದ ಧರ್ಮ ಸಂಕಟಕ್ಕೂ ಸಿಲುಕಬಹುದು, ಆಯ್ಕೆ ಗೊಂದಲಮಯದ ಸ್ಥಿತಿ ಆಗಲೂಬಹುದು.

ಇದು ಆರೋಗ್ಯಕರ ಬೆಳವಣಿಗೆ ನಿಜ. ಅತ್ತ ಉಗುಳಲು ಆಗದೆ ಇತ್ತ ನುಂಗಲೂ ಆಗದೇ ಇರುವ ಪರಿಸ್ಥಿತಿ ಬರಬಾರದು. ಬದುಕು ಅನಿವಾರ್ಯ ನಿಜ. ಆದರೆ ಕೆಲವೊಂದು ಅಗತ್ಯಗಳು ನಮ್ಮ ಜೀವನಕ್ಕೆ ಖಂಡಿತಾ ಬೇಕು! ಜೀವನ ಸುಸಾಂಗವಾಗಿ ನಡೆಯಲು. ಬದುಕು ಜಟಕಾ ಬಂಡಿ ಅಲ್ಲವೇ? ತೂಕ ಅಗತ್ಯ ಅನಿವಾರ್ಯವೇ?

# ವಿಶಿಷ್ಟ ಭಾಷೆ, ಸಂಸ್ಕೃತಿಯ ನೆಲೆವೀಡು ಕುಂದಾಪುರ



ಪ್ರದೀಪ ಶೆಟ್ಟಿ ಬೇಳೂರು

ಕುಂದಾಪುರ ಎಂದ ಕೂಡಲೇ ನಮಗೆಲ್ಲರಿಗೂ ನೆನಪಾಗುವ ಒಂದು ಅಂಶ ಕಡಲ ತೀರದ ಊರು ಮತ್ತು ಜನರು ಮಾತನಾಡುವ ಕುಂದಗನ್ನಡ ಆಡು ಭಾಷೆ. ಈ ಕಡಲ ತೀರದ ಊರಿಗೆ ಕುಂದಾಪುರ ಎಂದು ಹೆಸರು ಬರಲು ಒಂದು ವಿಶೇಷವಾದ ಕಾರಣವೂ ಇದೆ. ಅದೇನೆಂದರೆ ಅಳುಪ ರಾಜವಂಶ ಸರಿ ಸುಮಾರು ಹತ್ತು ಹನ್ನೊಂದನೇ ಶತಮಾನದಲ್ಲಿ ಈ ಭಾಗದಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಬಾರ್ಕೂರು ಅಳುಪ ರಾಜವಂಶದ ಆಡಳಿತದ ಕೇಂದ್ರ ಸ್ಥಾನವಾಗಿತ್ತು. ಕುಂದ ಎಂದರೆ ಮಲ್ಲಿಗೆ ಹೂವು ಹಾಗೆಯೇ ಕರಾವಳಿಯ ಈ ಭಾಗದಲ್ಲಿ ಮಲ್ಲಿಗೆ ಹೂವಿನ ಬೆಳೆ ಬಹುತೇಕ ಮಂದಿಯು ಬೆಳೆಯುತ್ತಿದ್ದರಿಂದ ಈ ಸ್ಥಳಕ್ಕೆ ಕುಂದಾಪುರ ಎಂದು ಹೆಸರು ಬಂತೆಂದು ಇತಿಹಾಸದಲ್ಲಿರುವ ಉಲ್ಲೇಖ ಹಾಗೂ ಕುಂದೇಶ್ವರ ದೇವಸ್ಥಾನ ಈ ಸ್ಥಳದಲ್ಲಿ ಇದ್ದುದರಿಂದ ಈ ಊರಿಗೆ ಕುಂದಾಪುರ ಎಂಬ ಹೆಸರು ಬಂತೆಂಬ ನಂಬಿಕೆಯು ಇದೆ.

ಕುಂದಾಪುರದ ಮತ್ತೊಂದು ವೈಶಿಷ್ಟ್ಯವೆಂದರೆ ಈ ಊರಿನ ಮೂರು ಕಡೆಯಲ್ಲಿ ನದಿಗಳಿದ್ದು ಅವುಗಳೆಂದರೆ ಉತ್ತರಕ್ಕೆ ಪಂಚಗಂಗಾವಳಿ, ಪೂರ್ವಕ್ಕೆ ಕಲಗರ ನದಿ, ಪಶ್ಚಿಮಕ್ಕೆ ಕೋಡಿ ಹಿನ್ನೀರು ಹಾಗೂ ದಕ್ಷಿಣಕ್ಕೆ ಭೂಪ್ರದೇಶದಿಂದ ಕೂಡಿದೆ. ಈ ಆಡು ಭಾಷೆಯಲ್ಲಿ ಮೂರು ಪ್ರಕಾರಗಳಿದ್ದು ಬಾರ್ಕೂರು ಕನ್ನಡ, ಕೋಟ ಕನ್ನಡ ಹಾಗೂ ಕುಂದಾಪುರ ಕನ್ನಡ. ವಾಣಿಜ್ಯ ದೃಷ್ಟಿಯಿಂದ ಕುಂದಾಪುರ ಮೂಲ ಸ್ಥಾನವಾಗಿ ಬೆಳೆದ ನಂತರ ಈ ಮೂರು ಪ್ರಕಾರಗಳೊಂದಾಗಿ ಕುಂದಾಪುರ ಕನ್ನಡ ಮುನ್ನೆಲೆಗೆ ಬಂತು ಎಂದು ಹೇಳಲಾಗುತ್ತದೆ. ಹೆಬ್ರಿಯಿಂದ ಬೈಂದೂರಿನ ನಡುವೆ ಈ ಆಡುಭಾಷೆ ಪ್ರಚಲಿತದಲ್ಲಿದ್ದು ವ್ಯಾವಹಾರಿಕ ಭಾಷೆಯಾಗಿ ಮತ್ತು ಭಾವನೆಗಳ ಸಂವಹನಕ್ಕೆ ಕುಂದಾಪುರದ ಜನರ ಬದುಕಿನಲ್ಲಿ ಕುಂದಗನ್ನಡ ನೆಲೆಯೂರಿದೆ.

ಇಲ್ಲಿಯ ಬಡಗುತಿಟ್ಟು ಯಕ್ಷಗಾನ ಕಲೆಯು ನಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದು ಈ ಕಲೆಯನ್ನು ಈ ಭಾಗದ ಜನರು ಅತ್ಯಂತ ಶ್ರದ್ಧೆಯಿಂದ ಆರಾಧಿಸುವರು ಹಾಗೆಯೇ ಕಂಬಳವು ಕೂಡ ಕುಂದಾಪುರದಲ್ಲಿ ಕಾಣಸಿಗುವ ವಿಶೇಷವಾದ ಜನಪದ ಕ್ರೀಡೆಗಳಲ್ಲೊಂದು. ಕುಂದಾಪುರದ ಜನರಾಡುವ ಈ ಆಡು ಭಾಷೆ ಬಹಳ ಸೌಜನ್ಯಯುತವಾಗಿ ಕೂಡಿದ್ದು ಕೇಳುಗರಿಗೆ ಕಸಿವಿಸಿಯನ್ನುಂಟು ಮಾಡುವ ಪದಬಳಕೆ ಸಾಮಾನ್ಯವಾಗಿ ವಿರಳ ಎನ್ನಬಹುದು ಮತ್ತು ಈ ನಮ್ಮ ಆಡುಭಾಷೆಯಲ್ಲಿ ಇರುವ ಕೆಲವು ವಿಶೇಷ ಪದಗಳಿಂದ ಈ ಭಾಗದ ಜನರು ಯಾವ ಊರಿಗೆ ಹೋದರೂ ಇವರು ಕರಾವಳಿಯ ಕುಂದಾಪುರದವರು ಎಂದು ಗುರುತಿಸುವಷ್ಟು ಈ ಭಾಷೆ ಇಂದು ಪ್ರಚಲಿತಗೊಂಡಿದೆ. ಕುಂದಾಪುರದ ಹಲವು ವಿಶೇಷಗಳಲ್ಲಿ ಮೊದಲನೆಯದಾಗಿ ಪರಶುರಾಮರು ನಿರ್ಮಿಸಿದ ಸಪ್ತ ಕ್ಷೇತ್ರಗಳಲ್ಲಿ ನಾಲ್ಕು ಪುಣ್ಯ ಕ್ಷೇತ್ರಗಳಾದ ಕೊಲ್ಲೂರು, ಕೋಟೇಶ್ವರ, ಕುಂಭಾಶಿ, ಶಂಕರನಾರಾಯಣ ನಮ್ಮ ಕುಂದಾಪುರದಲ್ಲಿರುವುದು ಹೆಮ್ಮೆಯ ವಿಚಾರ ಮತ್ತು ಈ ನೆಲಕ್ಕೆ ಎಷ್ಟು ದೈವಿಕ ಶಕ್ತಿಯಿದೆ ಎನ್ನುವುದು ನಾವು ಗಮನಿಸಬೇಕಾದ ವಿಚಾರ. ಸೋದೆ ಮಠದ ಪರಂಪರೆಯ ಪ್ರಮುಖ ಯತಿಗಳಾದ ಶ್ರೀ ವಾದಿರಾಜರು ಜನಿಸಿರುವ ಉಳ್ಳೂರು ಕೂಡ ಇರುವುದು ನಮ್ಮ ಕುಂದಾಪುರಕ್ಕೆ ಇರುವ ಇನ್ನೊಂದು ಹಿರಿಮೆ. ಈ ನಮ್ಮ ಪುಣ್ಯಭೂಮಿಯಲ್ಲಿ ಹಲವಾರು ಪ್ರಸಿದ್ಧ ದೇವಸ್ಥಾನಗಳಿದ್ದು ಅದರಲ್ಲಿ ಆನೆಗುಡ್ಡೆ ವಿನಾಯಕ, ಕೊಲ್ಲೂರು ಮೂಕಾಂಬಿಕೆ, ಕಮಲಶಿಲೆ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ, ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ಹೀಗೆ ಹಲವಾರು ದೇವಸ್ಥಾನಗಳಿವೆ. ಈ ಎಲ್ಲ ಪ್ರಸಿದ್ಧ ದೇವಾಲಯಗಳಿಗೆ ಬರುವ ಭಕ್ತಾದಿಗಳಿಗೆ ಹಸಿವು ತಣಿಸುವ ಕಾರ್ಯ ವರ್ಷ ಪೂರ್ತಿ ಮಾಡುವುದರ ಮೂಲಕ ನಮ್ಮ ಊರಿಗೆ ಬರುವ ಯಾತ್ರಿಕರ ಹಸಿವು ನೀಗಿಸುವ ಕಾರ್ಯ ಬಹಳ ಕಾಲದಿಂದ ನಡೆಯುತ್ತಿದೆ.

ನಾಲ್ಕು ಕಡೆ ನೀರು ಆವರಿಸಿ ಮಧ್ಯೆ ಚಿಕ್ಕ ಚಿಕ್ಕ ಊರುಗಳಿರುವ ಹಲವು ಕುದ್ರುಗಳು ಕುಂದಾಪುರದಲ್ಲಿ ಕಾಣಬಹುದಾಗಿದ್ದು ಅದರಲ್ಲಿ ಉಪ್ಪಿನಕುದ್ರು ಒಂದು ಕಾಲದಲ್ಲಿ ಉಪ್ಪು ಮತ್ತು ಸಮುದ್ರ ಆಹಾರಗಳ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು. ಟಿಪ್ಪು ಸುಲ್ತಾನ್ ಕಾಲಘಟ್ಟದಲ್ಲಿ ಶಸ್ತ್ರಾಸ್ತ್ರಗಳ ಶೇಖರಣೆಯ ಬಹುದೊಡ್ಡ ಸ್ಥಳವಾಗಿತ್ತು ಎಂಬುದು ಇತಿಹಾಸದ ಪುಟಗಳಲ್ಲಿ

ಉಲ್ಲೇಖವಾಗಿದೆ. ಇದರೊಂದಿಗೆ ಹತ್ತೊಂಬತ್ತನೆಯ ಶತಮಾನದ ತನಕ ಪ್ರಸಿದ್ಧ ವಾಣಿಜ್ಯ ಸ್ಥಳವಾಗಿದ್ದು ಬಸ್ರೂರಿಗೆ ಅರಬ್ಬಿ ಸಮುದ್ರದ ಮೂಲಕ ತಲುಪಲು ಉಪ್ಪಿನಕುದ್ರು ಸಹಕಾರಿಯಾಗಿತ್ತು ಎಂದು ಹೇಳಲಾಗುತ್ತದೆ.

ಶೈಕ್ಷಣಿಕವಾಗಿ ಕುಂದಾಪುರವು ಕರ್ನಾಟಕದಲ್ಲಿ ಮುಂದುವರಿದ ಸ್ಥಳವಾಗಿದ್ದು ಇಲ್ಲಿನ ಹಲವಾರು ವಿದ್ಯಾಸಂಸ್ಥೆಗಳಲ್ಲಿ ಪರ ಊರಿನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ನಡೆಸುತ್ತಿದ್ದು ಇದು ನಮ್ಮ ಊರಿನಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಕೊಡುವ ಮಹತ್ವವನ್ನು ಎತ್ತಿಹಿಡಿಯುತ್ತಿದೆ. ಈ ಭಾಗದ ಜನರು ಸಮಾಜದ ವಿವಿಧ ಕ್ಷೇತ್ರಗಳಾದ ಶಿಕ್ಷಣ, ಕ್ರೀಡೆ, ಔದ್ಯೋಗಿಕ, ವೈಜ್ಞಾನಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳೆಲ್ಲದರಲ್ಲೂ ತಮ್ಮ ಛಾಪು ಮೂಡಿಸುತ್ತಿರುವುದು ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಚಾರವಾಗಿದೆ. ಈ ಭಾಗದ ಜನರು ಸಹೃದಯಿ ಮನಸುಳ್ಳವರು. ಎಲ್ಲಾ ಧಾರ್ಮಿಕ ನಂಬಿಕೆಯುಳ್ಳ ಜನರೊಂದಿಗೆ ಸಾಮರಸ್ಯದ ಬದುಕು ಸಾಗಿಸುವವರು ಆದರೆ ರಾಷ್ಟ್ರ ಪ್ರೇಮ ಮತ್ತು ಧಾರ್ಮಿಕ ನಂಬಿಕೆಗಳು ಎದುರಾದಾಗ ತುಂಬ ಕಠಿಣವಾಗಿ ತಮ್ಮ ನಿರ್ಧಾರವನ್ನು ತೋರ್ಪಡಿಸುವ ಮನಸ್ಸುಳ್ಳವರು. ವಿಶ್ವ ಕುಂದಾಪುರ ಕನ್ನಡ ದಿನದ ಆಚರಣೆಯ ಸುಸಂದರ್ಭದಲ್ಲಿರುವ ನಾವು ನಮ್ಮ ಇತಿಹಾಸ ಮತ್ತು ಈ ಭಾಷೆಯ ಅಂತಃಶಕ್ತಿಯ ಬಗ್ಗೆ ನಮ್ಮ ಮುಂದಿನ ಪೀಳಿಗೆಗೆ ಕಲಿಸುವ ಕೆಲಸ ನಮ್ಮೆಲ್ಲರಿಂದಲೂ ಆಗಬೇಕಿದೆ. ಭಾಷೆಯ ಅಳಿವು ಉಳಿವು ನಾವು ಬಯಸುವ ರೀತಿಯಲ್ಲಿ ಇರುತ್ತದೆ ಮತ್ತು ನಮ್ಮ ಆಡುಭಾಷೆ ಮತ್ತು ನಾವು ಬೆಳೆದು ಬಂದಿರುವ ಪರಿಸರದ ಬಗ್ಗೆ ಅರಿತಷ್ಟು ಮುಂದಿನ ಜನಾಂಗಕ್ಕೆ ಭಾಷೆ ಮತ್ತು ಸ್ಥಳದ ಪ್ರಾಮುಖ್ಯತೆಯ ಜಾಗೃತಿ ಮೂಡುತ್ತದೆ ಮತ್ತು ಆ ಕಾರ್ಯ ಇಂದು ನಡೆಯಲಿ ಎಂಬುದೇ ಈ ವಿಶ್ವ ಕುಂದಾಪ್ರ ಕನ್ನಡದ ದಿನದ ಮೂಲಕ ಮುಂಬರುವ ದಿನಗಳ ಉದ್ದೇಶವಾಗಲಿ ಎನ್ನುವುದೇ ಈ ಲೇಖನದ ಆಶಯ.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

**ಮಹಿಳಾ ವಿಭಾಗ**

**ಡಾ. ಅನುಷಾ, ಮಿಲನ ಆಸ್ಪತ್ರೆ**
ಇವರೊಂದಿಗೆ

**ಸಮಾಲೋಚನಾ ಕಾರ್ಯಕ್ರಮ**

**ದಿನಾಂಕ 19.08.2023, ಶನಿವಾರ**
**ಸಮಯ: ಮಧ್ಯಾಹ್ನ 3.00ರಿಂದ, ಸ್ಥಳ: ಬಂಟರ ಸಂಘ ಸೆಮಿನಾರ್ ಹಾಲ್**

**ಮಹಿಳಾ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.**

**ಎಂ. ಮುರಲೀಧರ ಹೆಗ್ಡೆ**
**ಅಧ್ಯಕ್ಷರು**

**ಆನಂದರಾಮ ಶೆಟ್ಟಿ ಬಿ.**
**ಗೌರವ ಕಾರ್ಯದರ್ಶಿ**

**ಮಾಲತಿ ಜೆ. ಶೆಟ್ಟಿ**
**ಚೇರ್‌ಪರ್ಸನ್, ಮಹಿಳಾ ವಿಭಾಗ**

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಮಹಿಳಾ ವಿಭಾಗದ ಸದಸ್ಯರು**

# ಸ್ವಾತಂತ್ರ್ಯ ಮತ್ತು ಬ್ರಿಟಿಷರ ಘನಘೋರ ಅಪರಾಧಗಳು



ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ

ತಕ್ಕಡಿ ತೂಗುತ್ತಾ ವ್ಯಾಪಾರಕ್ಕೆಂದು ನಮ್ಮ ಕಡಲ ತೀರಕ್ಕೆ ಕಾಲಿಟ್ಟ ಫರಂಗಿ ಬ್ರಿಟಿಷರು ಭವ್ಯ ಭಾರತದ ಪರಂಪರೆ, ಆರ್ಥಿಕತೆ, ಸಂಸ್ಕೃತಿಯನ್ನು ನಾಶಗೊಳಿಸಿ ಪೂರಾ ಭಾರತವನ್ನು ಆಕ್ರಮಿಸಿ ಒಡೆದು ಆಳುವ ನೀತಿ (divide and rule) ಯಿಂದ ಭಾರತೀಯರಲ್ಲಿ ಅಂತಃಕಲಹಕ್ಕೆ ಎಡೆ ಮಾಡಿ ಸಾರ್ವಭೌಮತ್ವದಿಂದ ಭಾರತದ ಪ್ರಜೆಗಳನ್ನು ಅನಾಯಾಸವಾಗಿ, ಆವರ ದಾಸ್ಯಕ್ಕೆ ಸಿಲುಕಿಸಿದರು. ತಮ್ಮನ್ನು ತಾವೇ ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಘೋಷಿಸಿಕೊಂಡರು. ತಮ್ಮ ಅಮಾನವೀಯ ಕಠೋರ ದುಷ್ಕೃತ್ಯಗಳಿಂದ ನಮ್ಮನ್ನು ಘಾಸಿಗೊಳಿಸಿದ್ದು ನಮ್ಮ ಪಾಲಿಗೆ ಎಂದೆಂದೂ ದುರಸ್ತಿಗೊಳಿಸಲಾರದ ಘೋರ ದುರಂತವಾಯಿತು.

**ಬ್ರಿಟಿಷರ ಕಠೋರ ಕೃತ್ಯಗಳು:** ಹತ್ತೊಂಬತ್ತನೆಯ ಶತಮಾನದ ಮಧ್ಯದಲ್ಲಿ ಹಿಂಡಿದರೆ ಬಂಗಾರವನ್ನು ಸುರಿಸುವ ಪುಣ್ಯಕೋಟಿಯ ನಾಡಾಗಿದ್ದ ನಮ್ಮ ಮಾತೃಭೂಮಿಯ ಮಡಿಲಿಗೆ ಕೊಡಲಿಯೇಟು ಕೊಟ್ಟು ಲೂಟಿ ಮಾಡಿದರು. ಅವರ ಅಟ್ಟಹಾಸ ಮತ್ತು ಕ್ರೌರ್ಯ ಭಾರತಕ್ಕಷ್ಟೇ ಸೀಮಿತವಾಗಿರಲಿಲ್ಲ. ಬ್ರಿಟಿಷರು ಕಾಲಿಟ್ಟ ಸಂದರ್ಭದಲ್ಲಿ ವಿಶ್ವದ ಶೇ.23ರಷ್ಟಿದ್ದ ನಮ್ಮ ಆರ್ಥಿಕತೆ ಈ ಫರಂಗಿಗಳು ಹೋಗುವಾಗ ಶೇ. 4ಕ್ಕೆ ಕುಸಿಯಿತು. ಅಷ್ಟೂ ಸಂಪತ್ತನ್ನು ಭಾರತವು ಬ್ರಿಟಿಷ್ ಸಾಮ್ರಾಜ್ಯದ ಶ್ರೇಯೋಭಿವೃದ್ಧಿಗಾಗಿ ಧಾರೆ ಎರೆಯಿತು.

ಜವುಳಿ ವ್ಯಾಪಾರದಲ್ಲಿ ಶೇ. 27ರ ಹಿಡಿತವನ್ನು ಸಾಧಿಸಿಟ್ಟುಕೊಂಡಿದ್ದ ಭಾರತ ಅವರು ಬಿಟ್ಟು ಹೋಗುವಾಗ ಶೇ.2ಕ್ಕೆ ಇಳಿಯಿತು. ನೇಯ್ಗೆಗೆ ಹೆಸರಾಗಿದ್ದ ಭಾರತದ ನೇಕಾರರ ಕೈಮುರಿದು ನೇಯ್ಗೆ ಯಂತ್ರಗಳನ್ನು ಮೂಲೆ ಗುಂಪು ಮಾಡಿ ಅದರ ಮೇಲೆ ಕರಭಾರ ಹೊರಿಸಿ ವ್ಯವಸ್ಥಿತ ರೀತಿಯಲ್ಲಿ ನಾಶಮಾಡಿ ನಮ್ಮ ಕಚ್ಚಾ ವಸ್ತುಗಳನ್ನು ಕಡಿಮೆ ಬೆಲೆಗೆ ತರಿಸಿಕೊಂಡು ಲಂಡನ್‌ನ ತಮ್ಮ ಮಿಲ್ಲುಗಳಲ್ಲಿ ಹೊಲಿಸಿ ಜಗತ್ತಿನಾದ್ಯಂತ ಮಾರುಕಟ್ಟೆಗೆ ತಳ್ಳಿ, ಜಗತ್ತಿಗೇ ರಫ್ತು ಮಾಡಿ ತಮ್ಮ ಭದ್ರ ಮುಷ್ಠಿಯಿಂದ ಭಾರತೀಯ ನೇಕಾರರನ್ನು ಹಿಚುಕಿ ಬೀದಿ ಪಾಲು ಮಾಡಿ ಬ್ರಿಟಿಷ್ ದೇಶದ ಸವ್ಯಸಾಚಿ ಕೈಗಾರಿಕಾ ಕ್ರಾಂತಿ ಎಂದು ಬೀಗಿಕೊಂಡರು.

**ಬ್ರಿಟಿಷರ ಪಾಪಕರ್ಮ ಮತ್ತು ಹತ್ಯಾಕಾಂಡಗಳು:** ಎರಡನೆಯ ಮಹಾಯುದ್ಧದ ಸಮಯದಲ್ಲಿ ಬಂಗಾಳದ ಹತ್ಯಾಕಾಂಡದಲ್ಲಿ 40 ಲಕ್ಷ ಜನ ಧಾರುಣವಾಗಿ ತೀರಿಕೊಂಡರು. ಜನರಿಗೆ ಬೇಕಾದ ದಾಸ್ತಾನನ್ನು ಆಹಾರವಾಗಿ ನೀಡದೇ ಬ್ರಿಟಿಷರ ಆಪತ್ಕಾಲಕ್ಕೆ ಬೇಕು ಎಂದರು ಅಂದಿನ ಪ್ರಧಾನಿ ವಿನ್ಸೆಂಟ್ ಚರ್ಚಿಲ್, ಅರೆಹೊಟ್ಟೆ ಉಣ್ಣೋರು ಉಪವಾಸ ಸಾಯಲಿ–ಇದು ಅವರ ಉದಾರಗುಣವಾಗಿತ್ತು. ಹೇಗಿದೆ? ದ್ವೇಷ, ಅಪನಂಬಿಕೆ ಬ್ರಿಟಿಷ್ ಆಡಳಿತದ ಅವಿನಾಭಾವ ಅಂಗಗಳಾಗಿದ್ದವು. ಮೊದಲ ಮಹಾಯುದ್ಧದಲ್ಲಿ ಸೆಣಸಿದ ಭಾರತದ ಸೇನಾನಿಗಳು ಶೇ 18 ಆಗಿದ್ದರು. ಇವರಲ್ಲಿ 54000 ಜನ ತಮ್ಮ ಜೀವವನ್ನು ಯುದ್ಧ ಭೂಮಿಯಲ್ಲಿ ಕಳೆದುಕೊಂಡರು. 65000 ಜನ ಅಂಗವಿಕಲರಾದರು. ತನ್ಮೂಲಕ ಬ್ರಿಟಿಷರಿಗಾಗಿ ಭಾರತ ಮಾಡಿದ ಖರ್ಚು ಅಂದಿನ 8 ಬಿಲಿಯನ್ ಪೌಂಡ್ (800 ಕೋಟಿ ಪೌಂಡ್) ಸದ್ರಿ ವಿನಾಶದ ಮಹಾಯುದ್ಧಕ್ಕಾಗಿ 1.7 ಕೋಟಿ ಮದ್ದುಗುಂಡುಗಳನ್ನು, 6 ಲಕ್ಷ ರೈಫಲ್‌ಗಳನ್ನು ಮೆಷಿನ್‌ಗಳನ್ನು ಪೂರೈಸಿದುದಲ್ಲದೆ 4.2 ಕೋಟಿ ಅಂಗಿ ಪೈಜಾಮವನ್ನು ಹೊಲಿದು ಕೊಟ್ಟಿತು ಭಾರತ. ಈ ಯುದ್ಧದಲ್ಲಿ 13 ಲಕ್ಷ ಭಾರತೀಯರು ಹೋರಾಡಬೇಕಾಯಿತು. 1.73 ಲಕ್ಷ ಪ್ರಾಣಿಗಳ ಆಹಾರ ಔಷಧಿ ಎಂದು 37 ಕೋಟಿ ಟನ್ ಸಾಮಾಗ್ರಿಯನ್ನು ಬ್ರಿಟನ್ ನಮ್ಮಿಂದ ಕಿತ್ತುಕೊಂಡಿತ್ತು.

ಈ ಬ್ರಿಟಿಷರ ಶಕ್ತಿ ವಿಸ್ತೀರ್ಣದಲ್ಲಿ ಜಗತ್ತಿನಲ್ಲಿ ಏಳನೆಯ ದೊಡ್ಡದಾದ, ಜನಸಂಖ್ಯೆಯಲ್ಲಿ ಎರಡನೆಯ ದೊಡ್ಡ ರಾಷ್ಟ್ರವಾದ ಭಾರತವನ್ನು ತೂಕ ಮಾಡಿ ಅಳೆದು ತೊಗಟೆಯನ್ನು ಬಿಟ್ಟು ರಸವನ್ನು ತನ್ನ ರಾಷ್ಟ್ರಕ್ಕೆ ಹಡಗಿನಲ್ಲಿ ರವಾನಿಸಿತು.

ಹಿಂದುಳಿದ ದೇಶಗಳ ಬಡತನ, ಜನಾಂಗೀಯ ಕಲಹ, ರಕ್ತಪಾತ, ದರೋಡೆಗೆ ಬ್ರಿಟಿಷರು ನಡೆಸಿದ ವಸಾಹತುಶಾಹಿ ಆಡಳಿತವೇ ಕಾರಣ ಎನ್ನುವುದನ್ನು ಮರೆಯುವಂತಿಲ್ಲ. ಈಗಲೂ ಅನುಭವಿಸುವ ಜನಾಂಗೀಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ಜಗಳಗಳ ಮೂಲ ಬೇರು ಬ್ರಿಟಿಷ್ ಆಡಳಿತೆಯ ವಸಾಹತು ಶಾಹಿಗಳ ಮೂಲಮಂತ್ರ, ಎರಡು ಶತಮಾನಗಳ ಕಾಲ ಒಂದು ದೇಶದ ಜನರನ್ನು ತುಳಿದು ಹಿಂಸಿಸಿ ಶೋಷಿಸಿಕೊಂಡು ಅಪಾರ ಸಂಪತ್ತನ್ನು ಕೊಳ್ಳೆ ಹೊಡೆದುದು. ದೇಶದ ವಜ್ರ ವೈಡೂರ್ಯ ಚಿನ್ನ ಬೆಳ್ಳಿ, ಮುತ್ತುರತ್ನಗಳನ್ನು ಅಪಹರಿಸಿ ಬೆಲೆ ಕಟ್ಟಲಾಗದ ಅಮೂಲ್ಯ ಕೋಹಿನೂರ್ ವಜ್ರ

ಬ್ರಿಟಿಷ್ ರಾಣಿಯ ಮುಡಿಯ ಕಿರೀಟಕ್ಕೆ ಏರಿಸಿದರು. ಕ್ರೂರ ಕಠೋರ ಅಟ್ಟಹಾಸದ ಆಡಳಿತ ನಡೆಸಿ ಕೊನೆಗೊಂದು ದಿನ ಭಾರತಕ್ಕೆ ಪ್ರಜಾಪ್ರಭುತ್ವವನ್ನು ದಯಪಾಲಿಸಿದ್ದೇವೆ ಎಂದು ಕೊಚ್ಚಿಕೊಳ್ಳುವುದರಲ್ಲಿ ಯಾವ ಹೆಗ್ಗಳಿಕೆಯಿದೆ? ನಮಗೆ ನ್ಯಾಯಯುತವಾಗಿ ಸಿಗಬೇಕಾದ ಪ್ರಜಾಪಭುತ್ವಕ್ಕೆ ತ್ಯಾಗ ಬಲಿದಾನ, ಹೋರಾಟಮಾಡಿ ನೂರೈವತ್ತು ವರ್ಷಗಳ ಕಾಲ ನಮ್ಮ ಮಾತೃಭೂಮಿಯಲ್ಲಿ ರಕ್ತ ಬಸಿಯಬೇಕಾಯಿತು ಎಂಬುದನ್ನು ಮರೆಯಲು ಸಾಧ್ಯವೇ?

1915ರಿಂದ ಗಾಂಧೀಜಿಯವರು ಸ್ವಾತಂತ್ರ್ಯ ಸಂಗ್ರಾಮದ ನಾಯಕತ್ವವನ್ನು ವಹಿಸಿದರು. ಅಹಿಂಸಾತ್ಮಕ ಸತ್ಯಾಗ್ರಹಕ್ಕೆ ಕರೆಯಿತ್ತು ತಾವು ಹಲವಾರು ಬಾರಿ ಒದೆ, ಪೆಟ್ಟು, ತಿವಿತವನ್ನು ತಿಂದು ಜೈಲುವಾಸಕ್ಕೆ ಒಳಗಾದರು. ಅದೆಷ್ಟೋ ಮಂದಿ ಜೈಲು ಸೇರಿದರು. ಪ್ರಾಣತ್ಯಾಗ ಮಾಡಿದರು. 1920ರ ಅಸಹಕಾರ ಚಳವಳಿ, 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಎಲ್ಲಾ ನಾಯಕರು ದಸ್ತಗಿರಿಯಾಗಿ ಜೈಲು ಸೇರಿದರು. ದೇಶಕ್ಕೆ ದೇಶವೇ ಗುಲಾಮಗಿರಿಯಿಂದಿರುವುದು ಯಾರಿಗೂ ಶೋಭೆ ತರುವುದಿಲ್ಲ ಎಂದು ಮನಗಂಡು ತ್ಯಾಗ ಬಲಿದಾನಗಳಿಂದ ಹೋರಾಟ ಪ್ರಾರಂಭಿಸಿದರು.

1945ರಲ್ಲಿ ಎರಡನೆಯ ಮಹಾಯುದ್ಧದ ನಂತರ ಕ್ಲೆಮೆಂಟ್ ಆಟ್ಲಿಯವರು ಅಧಿಕಾರಕ್ಕೆ ಬಂದು ಭಾರತೀಯರ ರಕ್ತಪಾತವಿಲ್ಲದ ಹೋರಾಟಕ್ಕೆ ಮಣಿದು 1947 ಆಗಸ್ಟ್ 15ಕ್ಕೆ ಸ್ವಾತಂತ್ರ್ಯವನ್ನು ಘೋಷಿಸಿದರು. ಭಾರತದ ತ್ರಿವರ್ಣ ಧ್ವಜ ಹಾರಿತು. ಆಂಗ್ಲ ಸರಕಾರದ ಧ್ವಜ ಕೆಳಗಿಳಿಯಿತು. ಪ್ರಚಲಿತ ಸ್ವಾತಂತ್ರ್ಯ ಪೂರ್ವ ವಿದ್ಯಮಾನಗಳ ಬಗ್ಗೆ ಅವಲೋಕಿಸುವುದಿದ್ದರೆ ನಾವು ಅಭಿವೃದ್ಧಿಗೊಂಡಿದ್ದೇವೆ ಆದರೆ ಇತರೆ ಮುಂಚೂಣಿಯುಲ್ಲಿರುವ ಅಭಿವೃದ್ಧಿ ಹೊಂದಿದ ದೇಶಗಳ ವೇಗದಲ್ಲಿ ಸಾಗುತ್ತಾ ಬರಲಿಲ್ಲ. ಸಂಶೋಧನೆ ಮತ್ತು ಅನ್ವೇಷಣೆಗಳಲ್ಲಿ ಹಿಂದುಳಿದಿದ್ದೇವೆ. ಜನಸಂಖ್ಯೆ ನಿಯಂತ್ರಣಬೇಕು. ಅದೇ ಸಂದರ್ಭದಲ್ಲಿ ಪ್ರತಿಯೊಬ್ಬ ವ್ಯಕ್ತಿಯನ್ನು ಮೂಲ ಸಂಪತ್ತು ಮತ್ತು ರಕ್ಷಣೆಯ ಹೊಣೆಗಾರರನ್ನಾಗಿ ಮಾಡಬೇಕಾಗಿದೆ. ಎಲ್ಲರ ಸಾಮರ್ಥ್ಯಕ್ಕನುಗುಣವಾಗಿ ಉಪಯೋಗಿಸಿ ದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸಬೇಕಾಗಿದೆ ಎಂದರೆ ತಪ್ಪುಂಟೆ?

ಪ್ರತಿಭಾ ಪಲಾಯನ (Brain drain))ವನ್ನು ತಡೆಗಟ್ಟಲೇ ಬೇಕು. ಬುದ್ಧಿವಂತ ಯುವಕರು, ಅರಿವು, ವಿದ್ಯೆ ಪಾಂಡಿತ್ಯವೆಲ್ಲವನ್ನೂ ಈ ದೇಶದ ಅತ್ಯಂತ ಶ್ರೇಷ್ಠ ವಿದ್ಯಾಸಂಸ್ಥೆಗಳಲ್ಲಿ ಹೆಚ್ಚು ಕಡಿಮೆ ಪುಕ್ಕಟೆಯಾಗಿ (ಅತೀ ಸುಲಭದಲ್ಲಿ) ಪಡೆದು. ಮುಂದುವರಿದ ರಾಷ್ಟ್ರಗಳ ಮಾನವ ಸಂಪನ್ಮೂಲಗಳಾಗುತ್ತಿದ್ದಾರೆ. ನಮ್ಮಲ್ಲಿ 6 ರಾಷ್ಟ್ರೀಯ, 54 ರಾಜ್ಯಗಳ, 2597 ಅಮಾನ್ಯ ರಾಜಕೀಯ ಪಕ್ಷಗಳಿದ್ದರೂ 10 ಪ್ರಮುಖ ವಿಧದ ನೃತ್ಯ ಪದ್ಧತಿ, 22 ಸಾಂವಿಧಾನಿಕ ಭಾಷೆಗಳು (8th Schedule) 1500ಕ್ಕೂ ಹೆಚ್ಚಿನ ಆಡುಭಾಷೆಗಳು, 5 ಪ್ರಮುಖ ಮತ ಧರ್ಮಗಳಿದ್ದರೂ ಭಾಷೆ ಭೂಷಣ, ಭಜನೆ, ಭೋಜನವೆಲ್ಲದರಲ್ಲಿ ವೈವಿಧ್ಯತೆಯಿದ್ದರೂ, 25%ಕ್ಕಿಂತ ಹೆಚ್ಚಿನ ಅನಕ್ಷರಸ್ಥರಿದ್ದರೂ–ಈ ಜಗತ್ತಿಗೆ ಅತ್ಯಂತ ಹೆಚ್ಚಿನ ಡಾಕ್ಟರ್, ಇಂಜಿನಿಯರ್, ತಂತ್ರಜ್ಞಾನಿಗಳು, ವಿದ್ವಾಂಸರುಗಳನ್ನು ನೀಡಿದೆ ನಮ್ಮ ದೇಶ.

ಎಲ್ಲಾ ದೇಶಗಳನ್ನು ಹಿಂದಿಕ್ಕಿ ಮುಂದೆ ಹೋಗಬಹುದಿತ್ತು ಆದರೆ ಅದಕ್ಕೆ ಕಾರಣ ಪ್ರತಿಯೊಬ್ಬ ಓದುಗನಿಗೂ ತಿಳಿದಿದೆ. ಬರೆಯುವಷ್ಟು ಇದ್ದರೂ ಸೂಕ್ತವಲ್ಲ, ಆದರೂ ನಮ್ಮ ಆಡಳಿತ ವ್ಯವಸ್ಥೆಯ ವೈಖರಿ ಮತ್ತು ಕೌಶಲಾಭಿವೃದ್ಧಿಯ ಕೊರತೆ ಮತ್ತು ಬಂಡವಾಳದ ಕೊರತೆ ನೀಗಿಸಿದರೆ ನಾವೇ ಸವ್ಯಸಾಚಿಗಳಾಗುವುದರಲ್ಲಿ ಎರಡು ಮಾತಿಲ್ಲ. ಆಡಳಿತ ವ್ಯವಸ್ಥೆಯು ಹಲವು ಸ್ಥರಗಳಲ್ಲಿ ಸುಧಾರಣೆ ಕಾಣುತ್ತಿದ್ದರೂ ಇನ್ನೂ ಪಾರದರ್ಶಕತೆ, ಕಾನೂನು ಪಾಲನೆ, ಪ್ರಾಮಾಣಿಕ ರಾಜಕಾರಣಿಗಳಿಗೆ ಬೆಂಬಲವಿತ್ತಲ್ಲಿ ನಾವೊಂದು ದಿನ ಇಡೀ ವಿಶ್ವದಲ್ಲಿ ಪ್ರಬಲ ರಾಷ್ಟ್ರವೆಂದೆನಿಸಬಹುದೆಂದು ನಂಬೋಣವೇ?

# Congratulations



Congratulations to Shikhar R Shetty for being the highest wicket taker in Under 19 KSCA cricket tournament. His team VULTURES Cricket Club became the champions of U19 tournament. He got 32 wickets in 8 matches and scored 3 fifties for his team. He is the grand son of Sri B.Jagannath Shetty (Retd.A.C.F.) and Bhavani J Shetty Jannadi and Late. Sri. Malar Venugopal Shetty and Vandana V Shetty and son of Sri Rajesh Shetty and Smt. Vachan Shetty. Bunts Sangha Bangalore congratulates and wishes him all the very best.

# THE INTEGRATION OF PRINCELY STATES UNIFYING A DIVERSE NATION



A.Girish Rai

**If we glance through the map of pre-Independent India, there were nearly 600 small and medium-sized principalities occupying about 40% of the land area from Kashmir to Kanyakumari. 23% of Indians were living in those areas. The various independent entities spoke different languages, had distinct culture, ways of life and were faced with the choice of joining India, joining Pakistan, or remaining independent as the Britishers left the country. This created an ambivalent situation needing a visionary Action Plan to quickly solve this forbiddingly complex problem.**

The process of integration of independent entities started much before Independence. This was a well thought out initiative of Sardar Vallabhai Patel, Deputy PM, Minister for Home Affairs, ably assisted by his secretary VP Menon to solve this forbiddingly complex issue. The government of India prepared two important Documents for the Accession of territories. The first one was for Accession with the Indian union and the second was for continuance of the existing position. Some states signed the documents between May-Aug 1947. Some wanted to remain independent. Prime Minister Jawaharlal Nehru made it clear that "Any state not willing to join India would be considered as enemy territory". Some states willingly joined the Indian Union due to their concern for the motherland, while others were compelled or coerced to do so. Kashmir, Junagadh, Bhopal, Hyderabad and Travancore wanted to remain independant.

### Case of Kashmir

Kashmir, one of the major princely state, faced a critical situation. Hari Singh, the last king of Kashmir, wanted to remain independent despite the offer to join with India. However, when Pakistan attempted to occupy Jammu and Kashmir soon after independence, Hari Singh approached Lord Mountbatten, the Governor-General of India, requesting Indian military intervention. The Governor General asked him to sign the Accession document, to which he agreed. The Indian Army was then sent to repulse the Pakistani forces, securing Kashmir as an integral part of India.

### Junagadh and the People's Protest



<u>Iron Man of India Sardar Patel</u>

Junagadh, governed by Nawab Mahabbath Khan, had predominantly Hindu population despite the ruler being Muslim. When the Nawab abruptly decided to merge Junagadh with Pakistan, despite no territorial affinity, the public took to the streets in opposition. Led by Mahatma Gandhi's nephew, Shamalal Das Gandhi, the protests intensified. Eventually, the Indian Army entered Junagadh, and the nawab fled to

Pakistan. The issue was taken up by the UN, and a referendum was held in February 1948 revealed that the majority opted to join with India.

**Bhopal and the Overthrowing of Evil Design**

Bhopal, once the separate state, was under the rule of Sir Hafeez Mohammed Hameed Ulla Khan. He had initially aligned with the Muslim League and dreamt of joining Pakistan along with other princely states. However, the timely intervention of Sardar Patel and the refusal of Maharaja of Udaipur to join this group thwarted his plan. Raja Hanvantha Singh, the ruler of Jodhpur, wanted to join Pakistan but changed his decision after realising the benefits of joining India.

## Hyderabad

The Nizam of Hyderabad was independent when Britishers began to expand their hegemony, Nizam became friendly with them and signed a subsidiary Alliance. Hyderabad principality extended over 214,170 sq. kms and was one of the richest principalities in the country. He was not willing to join and wanted to remain independent. Nizam was clandestinely planning to strengthen his fighting force with the Razakars. He purchased arms from Goa, Pakistan and Sydney. Nizam was confident that the Razakars led by Qasim Rizvi would help him to become independent. Even after a year after independence, Nizam proved to be a big problem to the central government. There was unrest in Hyderabad and surrounding areas where thousands of Hindus were displaced. Razakars drove out, dispeled Hindus on 6th Sep 1948 to some remote village in AP. Patel deputed the Army under the guise of police action to quell the razakars' onslaught. Within 3 days, the Nizam's army and razakars surrendered, and Hyderabad became a part of India on 13th September 1948, 13 months after the Indian independence.

**Iron Fist with a Velvet Glove**

The unification efforts led by Sardar Vallabhbhai Patel and his team were aimed at creating a strong and unified India. Through careful negotiations, strategic interventions, and the use of legal instruments like the Accession Documents, they were able to bring the princely states into the Indian Union. These efforts not only laid the foundation for a united nation but also ensured the preservation of India's diverse cultural heritage, along with the establishment of a strong, central government.

**The Significance of Integration for India's Future**

The integration of the princely states was a crucial step in shaping the future of India. It established a sense of unity and solidarity among the diverse regions and communities, fostering a shared national identity. It also enabled the implementation of uniform laws, policies, and development initiatives across the country, promoting equality and progress.

The process of integrating the princely states teaches us valuable lessons. It highlights the importance of effective leadership, negotiation skills, and diplomacy in resolving complex and challenging situations. The successful



integration of the princely states stands as a testament to India's resilience, determination, and commitment to unity in diversity. It serves as a reminder that despite differences in language, culture, and history, Indians can come together to build a strong and prosperous nation, and remain united as a nation. Furthermore, the integration of princely states had a profound impact on the democratic fabric of India. By embracing diverse populations and giving them equal representation, the nation became a true embodiment of democracy. The people of these states were granted the right to participate in the democratic process, ensuring their voices were heard and their interests were protected. This inclusivity not only strengthened the democratic ideals of India but also set an example for the world.

**India is a vibrant, diverse and largest democracy in the world. India would become the most populous country during 2023. Now, India is the world's 5th biggest economy in terms of GDP. It is also the world's fastest growing major economy. The goal is to become a USD 5 Trillion economy during this decade. Nearly 1 billion Indians will be within the working age group 15-64 years, by 2030. This will position our country as a powerhouse of human capital and the largest producer of human resources in the world. India is gradually becoming the global manufacturing hub.**

# GREEN DAY at BSRNSV-II




Green is the colour of life, nature, and energy. It is associated with growth and prosperity. The learners of Pre-Primary wing celebrated 'Green Day' on June 7th, 2023. The students and teachers came dressed in different shades of green. To reinforce the concept of colour, the following activities pertaining to green colour were arranged:

Montessori – Watering the plants

LKG – Distribution of saplings and thumb painting

UKG – Sowing seeds and palm painting

# ಅಭಿನಂದನೆಗಳು



ಕುಮಾರಿ ದಿವಿತಾ ಯು. ಶೆಟ್ಟಿಯವರು ದಿನಾಂಕ 22 ಮತ್ತು 23, ಜುಲೈ 2023ರಂದು ಬಿ. ಎಂ. ಎಸ್. ಇಂಜಿನಿಯರಿಂಗ್ ಕಾಲೇಜು ಆಯೋಜಿಸಿದ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದ ರಾಜ್ಯ ಮಟ್ಟದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಆರ್. ಎನ್. ಎಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯನ್ನು ಪ್ರತಿನಿಧಿಸಿ 2023ರ ರಾಜ್ಯ ಮಟ್ಟದ ಶಟಲ್ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್ (Championship) ಗೆದ್ದು ರಾಜ್ಯದಿಂದ ರಾಷ್ಟ್ರಮಟ್ಟದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ. ಕುಮಾರಿ ದಿವಿತಾರವರು ಪ್ರಸ್ತುತ RNS Institute of Technology ಯಲ್ಲಿ ಪ್ರಥಮ ವರ್ಷದ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದು, ಇವರು ಸಂಘದ ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಉಮಾನಾಥ ಶೆಟ್ಟಿ ಮತ್ತು ಶ್ರೀಮತಿ ಪ್ರಮೀಳಾ ಯು. ಶೆಟ್ಟಿಯವರ ಪುತ್ರಿ. ಇವರಿಗೆ ಬಂಟರ ಸಂಘದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳು

# SMT. YERUKONE SUSHEELA SHETTY

Yerukone Susheela Shetty is an icon well known in Kundapura for her sacrifice. Eldest of the six children of Late Tonse Ganapayya Shetty a leading lawyer in Udipi she was just 15 years old having born in 1933 and the youngest was not even 1 year when they became orphans.

Susheela assured her father in his last days to take care of her younger sibblings and took it up as a challenge the upbringing of the young siblings in her tender age with not much backing from the family.



Girls from small place going to college were a taboo those days much less in far away Mangalore, staying in Bunts Hostel. With the grandmother to look after the children, and with some support from well-wishers she joined St Agnes College where she passed out with Rank in B A in Mathematics and B T, again with Rank from St. Ann's in 1955.

She then joined St. Joseph's Girls High School, Kundapura as a teacher. First hurdle was crossed when one younger sister was married off at right age. Then the eldest of the brothers had his Engineering degree in Madras and was selected for higher studies in the University of Hawaii. The other two younger brothers were in their final years of college when she was selected under Fulbright Exchange Programme of USA to go there on teaching assignment for two years.

That was in 1965 when she was 32 years and single.

